**ದಿನಾಂಕ: 06-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ನಾನು ದಾವಣಗೆರೆಯಲ್ಲಿ 2022-2023 ರಿಂದ ವಾಸವಾಗಿರುತ್ತೇನೆ. ನಾನು ಈಗ ಸರ್ವೆ ಕೆಲಸ ಮಾಡುತ್ತಿದ್ದೇನೆ. ನಾನು ದಾವಣಗೆರೆಗೆ ಹೋಗುವ ಮುಂಚೆ ರಂಗೇನಹಳ್ಳಿಯಲ್ಲಿ ವಾಸವಿದ್ದೆ. ನಾನು ರಂಗೇನಹಳ್ಳಿಯಲ್ಲಿ ವಾಸವಿದ್ದ ಸಮಯದಲ್ಲಿ ಬಟ್ಟೆಗಳ ವ್ಯಾಪಾರವನ್ನು ಮನೆಯಲ್ಲೇ ಮಾಡುತ್ತಿದ್ದೆ. ಬಟ್ಟೆ ವ್ಯಾಪಾರವನ್ನು ನಾನು 2020 ನೇ ಇಸವಿಯಿಂದ ಶುರು ಮಾಡಿರುತ್ತೇನೆ. ಸದರಿ ವ್ಯಾಪಾರದಲ್ಲಿ ವಾರ್ಷಿಕ ಆದಾಯ 3 ರಿಂದ 4 ಲಕ್ಷ ಬರುತ್ತಿತ್ತು. ಸದರಿ ವ್ಯಾಪಾರದಿಂದ ಬಂದ ಹಣವನ್ನು ನಾನು ಬ್ಯಾಂಕಿನಲ್ಲೂ ಇಡುತ್ತಿದ್ದೆ, ಮನೆಯಲ್ಲೂ ಇಡುತ್ತಿದ್ದೆ. ಸದರಿ ವ್ಯಾಪಾರವನ್ನು ನಾನು ರಂಗೇನಹಳ್ಳಿಯ ನನ್ನ ಸ್ವಂತ ಮನೆಯಲ್ಲಿ ಮಾಡುತ್ತಿದ್ದೆ. ನಾನು ಬಟ್ಟೆ ವ್ಯಾಪಾರದ ಸಲುವಾಗಿ ಸೇಲ್ ಟ್ಯಾಕ್ಸನ್ನು ಕಟ್ಟುತ್ತಿದ್ದೆ. ಬಟ್ಟೆ ವ್ಯಾಪಾರ ಮಾಡುವ ಸಮಯದಲ್ಲಿ ನೀವು ಸ್ಟಾಕ್ ರಿಜಿಸ್ಟರ್ ನ್ನು ಮ್ಯಾನೇಟನ್ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ ಅದು 12 ಲಕ್ಷ ಮೇಲ್ಪಟ್ಟ ವ್ಯಾಪಾರಿಗಳಿಗೆ ಮಾತ್ರ ಅನ್ವಯಿಸುತ್ತದೆ, ನಾನು 12 ಲಕ್ಷದ ಕೆಳಗೆ ವ್ಯಾಪಾರ ಮಾಡಿರುತ್ತೇನೆಂದು ನುಡಿದಿರುತ್ತಾರೆ. ನೀವು ಸದರಿ ವಿಚಾರದ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ನಾನು ಸಣ್ಣ ಬಟ್ಟೆ ವ್ಯಾಪಾರ ಮಾಡುತ್ತಿದ್ದು ನನ್ನ ಹತ್ತಿರ ಯಾವುದೇ ಸೇಲ್ ಟ್ಯಾಕ್ಸ ಇರುವುದಿಲ್ಲ ಮತ್ತು ಮಾಹಿತಿ ಸಹ ಇರುವುದಿಲ್ಲ. ನಿಮಗೆ ವ್ಯಾಪಾರಾದ ಬಗ್ಗೆ ಎಲ್ಲಾ ವಿಷಯ ತಿಳಿದಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನಾನು ಬಟ್ಟೆಗಳನ್ನು ಮಧ್ಯಪ್ರದೇಶದ ಗ್ವಾಲಿಯರ್ , ಪಂಜಾಬ್ ನ ಕೆಲವು ಪ್ರದೇಶಗಳಿಂದ ಸಣ್ಣ ಮೊತ್ತದಲ್ಲಿ ಕೊಳ್ಳುತ್ತಿದ್ದೆ. ಅವರುಗಳಿಗೆ ಹಣವನ್ನು ನಾನು ಖುದ್ದಾಗಿ ನೀಡುತ್ತಿದ್ದೆ. ನೀವು ಬಟ್ಟೆ ಕೊಂಡುಕೊಳ್ಳುವುದಕ್ಕೆ ರಸೀದಿಯನ್ನು ನೀಡುತ್ತಾರೆಂದರೆ ಸರಿ. ಸದರಿ ರಸೀದಿಗಳನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸುವಲ್ಲಿ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ನನ್ನ ಹತ್ತಿರ ಈಗ ಯಾವುದೇ ರಸೀದಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.ನೀವು ಬಟ್ಟೆ ವ್ಯಾಪಾರ

ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ಹತ್ತಿರ ಯಾವುದೇ ದಾಖಲಾತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನೀವು ಯಾವುದೇ ಬಟ್ಟೆ ವ್ಯಾಪಾರ ಮಾಡಿರುವುದಿಲ್ಲ, ಹಾಗೂ ರಂಗೇನಹಳ್ಳಿಯಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ನೀವು ದಾವಣಗೆರೆಯಲ್ಲಿ ಹುಟ್ಟಿ ಬೆಳೆದಿರುತ್ತೀರಾ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಬ್ಯಾಂಕ್ ವ್ಯವಹಾರದ ಬಗ್ಗೆ ನಿಮಗೆ ತಿಳಿದಿದೆ ಎಂದರೆ ಸಾಕ್ಷಿ ಸ್ವಲ್ಪ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ. ಆರೋಪಿಯು ಬ್ಯಾಂಕ್ ಆಫ್ ಬರೋಡದಲಿಲ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಅವರು ವಿಜಯಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ದಿಃ 01-04-2019 ರಂದು ವಿಜಯಾ ಬ್ಯಾಂಕ್ ಬ್ಯಾಂಕ್ ಆಫ್ ಬರೋಡಗೆ ವಿಲೀನ ಗೊಂಡಿದೆ ಎಂದರೆ ಸಾಕ್ಷಿ ಹೌದು ಆರೋಪಿಯ ಜೊತೆ ವ್ಯವಹಾರ ಅದಕ್ಕೂ ಮುಂಚೆ ಮಾಡಿರುತ್ತೇನೆಂದು ನುಡಿದಿರುತ್ತಾರೆ. ಆರೋಪಿ ಬ್ಯಾಂಕಿನ ಕೆಲಸ ಹೊರತು ಬೇರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ನಿಮಗೆ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಆರೋಪಿ 2021 ನೇ ಇಸವಿಯಿಂದ ನನ್ನನ್ನು ಹಣ ಕೇಳುತ್ತಾ ಬಂದಿರುತ್ತಾರೆ. ಆರೋಪಿ ನನಗೆ ಸಿಕ್ಕಿದಾಗಲೆಲ್ಲಾ ಹಣ ಕೇಳುತ್ತಿದ್ದರು.

ನಾನು ನನ್ನ ಹತ್ತಿರ ಅಷ್ಟು ಹಣ ಇಲ್ಲ ಎಂದು ಹೇಳುತ್ತಿದ್ದೆ. ಆರೋಪಿಗೆ ನಾನು 15 ಲಕ್ಷ ರೂಪಾಯಿ ಹಣವನ್ನು ರಂಗೇನಹಳ್ಳಿಯಲ್ಲಿರುವ ನನ್ನ ಮನೆಯಲ್ಲಿ ಮಾರ್ಚ 2021 ರಂದು ಸಂಜೆ 7-00 ಗಂಟೆ ಸಮಯದಲ್ಲಿ ನೀಡಿರುತ್ತೇನೆ. 15 ಲಕ್ಷ ವನ್ನು ನಾನು ಐದೈದು ಲಕ್ಷದ ಮೂರು ಬಂಡಲ್ ಮಾಡಿ ನೀಡಿರುತ್ತೇನೆ. ನಾನು ಮಿಲಿಟರಿಯಿಂದ ನಿವೃತ್ತಿ ಹೊಂದಿ ಬಂದ ಹಣ ಮತ್ತು ನಾನು ಮನೆಕಟ್ಟಲು ಇಟ್ಟುಕೊಂಡಿದ್ದ ಹಣ ಮತ್ತು ಅಡಿಕೆ ತೋಟದಿಂದ ಬಂದ ಹಣ ಎಲ್ಲವನ್ನು ಸೇರಿಸಿ ಆರೋಪಿಗೆ ಹಣವನ್ನು ನೀಡಿರುತ್ತೇನೆ. ನನಗೆ ಮಿಲಿಟರಿಯಿಂದ ನಿವೃತ್ತಿ ಹೊಂದಿ ಬಂದ ಹಣದ ದಾಖಲಾತಿ ಹಾಗೂ ನನ್ನ ತೋಟದ ದಾಖಲಾತಿ ಹಾಜರುಪಡಿಸುವಲ್ಲಿ ನನಗೆ ಯಾವುದೇ ತೊಂದರೆ ಇರುವುದಿಲ್ಲ. ನೀವು ನಿಮ್ಮ ಹತ್ತಿರ 15 ಲಕ್ಷ ಹಣ ಇರುವ ಬಗ್ಗೆ ಯಾವುದೇ

ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ಹತ್ತಿರ ಹಣ ಕೈಯಲ್ಲಿ ಇದ್ದು, ಕೊಟ್ಟಿರುತ್ತೇನೆಂದು ನುಡಿದಿರುತ್ತಾರೆ. ನಾನು ಆರೋಪಿಗೆ ಹಣವನ್ನು ಬಡ್ಡಿಗೆ ನೀಡಿರುವುದಿಲ್ಲ, ಅವರು ಮೂರು ತಿಂಗಳಲ್ಲಿ ವಾಪಾಸ್ಸು ನೀಡುತ್ತೇನೆಂದು ನುಡಿದ ಕಾರಣ ನಾನು ಹಣವನ್ನು ನೀಡಿರುತ್ತೇನೆ. ನಾನು ಯಾವುದೇ ಟ್ಯಾಕ್ಸ ಪಾವತಿಗಾರ ಆಗಿರುವುದಿಲ್ಲ. ನಾನು ಆರೋಪಿಯಿಂದ ಹಣ ವಾಪಾಸ್ಸು ಪಡೆಯಲು ಅವರ ಮನೆ ಮತ್ತು ಅವರು ಕೆಲಸ ಮಾಡುತ್ತಿದ್ದ ಬ್ಯಾಂಕಿನಲ್ಲಿ ಹೋಗಿ ಕೇಳಿರುತ್ತೇನೆ. ಆರೋಪಿಯು ನನಗೆ ಚೆಕ್ಕನ್ನು ಮಾರ್ಚ್ 2021 ರಂದು ನೀಡಿರುತ್ತಾರೆ. ನೀವು ಮಾರ್ಚ 2021 ರಂದು ಆರೋಪಿ ನಿಮಗೆ ಚೆಕ್ ನೀಡಿರುವ ಬಗ್ಗೆ ನಿಮ್ಮ ಪಿರ್ಯಾದಿಯಲ್ಲಿ ಆಗಲೀ, ನೋಟೀಸ್ ನಲ್ಲಿ ಆಗಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ಪಿರ್ಯಾದಿಯಲ್ಲಿ ನೋಟೀಸ್ ನಲ್ಲಿ ತಿಳಿಸಿರುವುದು ನನಗೆ ಗೊತ್ತಿಲ್ಲ. ಆರೋಪಿಯು ಮಾರ್ಚ 2021 ರಂದು ನಿಮಗೆ ಯಾವುದೇ ಚೆಕ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮಾರ್ಚ 2021 ರಲ್ಲಿ ವಿಜಯ ಬ್ಯಾಂಕ್ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಆರೋಪಿ ನನಗೆ ಹೊಸ ಚೆಕ್ ಬುಕ್ ಬಂದಿರುವುದಿಲ್ಲ, ಹಳೆ ಚೆಕ್ ನಡೆಯುತ್ತದೆ ಎಂದು ತಿಳಿಸಿರುತ್ತಾರೆ, ಹಾಗಾಗಿ ನಾನು ಪಡೆದುಕೊಂಡೆ ಎಂದು ನುಡಿದಿರುತ್ತಾರೆ. ಆರೋಪಿಯು ನಿಮಗೆ ಯಾವುದೇ ಚೆಕ್ ನೀಡಿರುವುದಿಲ್ಲ, ಮತ್ತು ಹಳೆಯ ವಿಜಯ ಬ್ಯಾಂಕ್ ಚೆಕ್ ನಡೆಯುತ್ತದೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ರಂಗೇನಹಳ್ಳಿಯ ವಿಜಯ ಬ್ಯಾಂಕಿನಲ್ಲಿ 2018-2019 ರವರೆಗೂ ಕೆಲಸ ಮಾಡಿರುತ್ತಾರೆ. ನಾನು ರಂಗೇನಹಳ್ಳಿಯಲ್ಲಿರುವ ವಿಜಯ ಬ್ಯಾಂಕಿಗೆ ಹೋಗಿ ಬರುತ್ತಿದ್ದೆ ಎಂದರೆ ಸರಿ. ನಾನು 2007 ಸೆಪ್ಟೆಂಬರಿ ತಿಂಗಳಲ್ಲಿ ವಾಲೆಂಟರಿ ರಿಟೈರಮೆಂಟ್ ಪಡೆದುಕೊಂಡಿರುತ್ತೇನೆ. ಆರೋಪಿಯು 2013 ನೇ ಇಸವಿಯಿಂದ ರಂಗೇನಹಳ್ಳಿಯಲ್ಲಿದ್ದ ವಿಜಯ ಬ್ಯಾಂಕ್ ನಿಂದ ವರ್ಗಾವಣೆಯಾಗಿ ಬೇರೆ ಕಡೆ ಹೋಗಿರುತ್ತಾರೆಂದರೆ ನನಗೆ ಮಾಹಿತಿ ಇಲ್ಲ ಎಂದುನುಡಿದಿರುತ್ತಾರೆ. ಆನಂತರದಿಂದ ರಂಗೇನಹಳ್ಳಿಯ ವಿಜಯ ಬ್ಯಾಂಕಿಗೆ ವಾಪಾಸ್ಸು ಬಂದಿರುವುದಿಲ್ಲ ಎಂದರೆ ಅದು ನನಗೆ ತಿಳಿದಿರುವುದಿಲ್ಲ, ಅವರನ್ನು ಬ್ಯಾಂಕ್ ಹತ್ತಿರ ಭೇಟಿ ಆಗುತ್ತಿದ್ದೆ ಎಂದು ನುಡಿದಿರುತ್ತಾರೆ.

ಆರೋಪಿಯು 2021 ರಲ್ಲಿ ಬ್ಯಾಂಕ್ ಆಫ್ ಬರೋಡದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆರೋಪಿಗೆ ಸದರಿ ಬ್ಯಾಂಕಿನಲ್ಲಿ 1 ಲಕ್ಷಕ್ಕೂ ಹೆಚ್ಚು ಸಂಬಳ ಬರುತ್ತಿತ್ತು ಎಂದರೆ ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ. ಆದ್ದರಿಂದ ಆರೋಪಿಯು ನಿಮ್ಮ ಹತ್ತಿರ ಹಣ ಪಡೆದುಕೊಳ್ಳಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ಅವರ ಸಂಬಳದ ಬಗ್ಗೆ ನನಗೆ ಗೊತ್ತಿಲ್ಲ, ನನ್ನ ಹತ್ತಿರ ಅವರು ಹಣ ಪಡೆದಿರುತ್ತಾರೆಂದು ನುಡಿದಿರುತ್ತಾರೆ. ಆರೋಪಿಯು ವಿಜಯ ಬ್ಯಾಂಕಿನಲ್ಲಿ 2018 ರಲ್ಲಿ ಅಕೌಂಟ್ ನ್ನು ಕ್ಲೋಸ್ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿ ಅದು ನನಗೆ ಆರೋಪಿ ನೀಡಿದ ಚೆಕ್ಕನ್ನು ಬ್ಯಾಂಕ್ ಲ್ಲಿ ಕ್ಲೇಮ್ ಮಾಡಿದಾಗ ತಿಳಿದು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ರಂಗೇನಹಳ್ಳಿಯ ವೈನ್ಸ್‌ನ ಮಾಲೀಕರು ರಾಜಶೇಖರ್ ರವರು ನಿಮ್ಮ ತಾಯಿಯ ತಮ್ಮ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಆರೋಪಿಯು ರಾಜಶೇಖರ್ ಹತ್ತಿರ 5 ಲಕ್ಷ ಹಣವನ್ನು 2012 ರಿಂದ 2014 ನೇ ಸಾಲಿನಲ್ಲಿ ಮನೆ ಕಟ್ಟಲು ಪಡೆದುಕೊಂಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅದರ ಸಲುವಾಗಿ ಆರೋಪಿಯು ರಾಜಶೇಖರ್ ರವರಿಗೆ ವಿಜಯ ಬ್ಯಾಂಕಿನ 10 ಚೆಕ್ಕುಗಳನ್ನು ನೀಡಿರುತ್ತಾರೆಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.

ಆರೋಪಿಯು ನಿಮಗೆ ನೀಡಿದ ಚೆಕ್ಕು ಎಂದು ಹೇಳುತ್ತಿರುವ ಚೆಕ್ಕುಗಳು ರಾಜ್ ಶೇಖರ್ ರವರಿಗೆ ನೀಡಿದ 10 ಚೆಕ್ಕುಗಳಲ್ಲಿ 3 ಚೆಕ್ಕುಗಳು ಆಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ರಾಜಶೇಖರ್ ರವರಿಂದ ಪಡೆದ ಹಣವನ್ನು ಅವರಿಗೆ ವಾಪಾಸ್ಸು 20-07-2019 ಕ್ಕೆ ಅವರ ಅಕೌಂಟಿಗೆ ಹಾಕಿರುತ್ತಾರೆಂದರೆ ಅದು ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಆರೋಪಿಯು ಅವರು ರಾಜಶೇಖರ್ ರವರಿಗೆ ನೀಡಿದ ಚೆಕ್ಕನ್ನು ವಾಪಾಸ್ಸು ಕೇಳಿದ್ದು, ರಾಜಶೇಖರ್ ರವರು ಚೆಕ್ಕುಗಳು ಕಳೆದು ಹೋಗಿವೆ ಹುಡುಕಿ ಕೊಡುತ್ತೇನೆಂದು ನುಡಿದಿರುತ್ತಾರೆಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ರಾಜಶೇಖರ್ ರವರು ಆರೋಪಿಯಿಂದ ಅಕ್ರಮವಾಗಿ ಲಾಭ ಪಡೆಯಲು ನಿಮ್ಮಿಂದ ಆರೋಪಿಯ ಮೇಲೆ ಸುಳ್ಳು ಕೇಸನ್ನು

ದಾಖಲಿಸಿರುತ್ತಾರೆಂದರೆ ಸರಿಯಲ್ಲ. ರಾಜಶೇಖರ್ ಮತ್ತು ನೀವು ರಂಗೇನಹಳ್ಳಿಯಲ್ಲಿ ವಾಸವಾಗಿರುವ ಕಾರಣ ಪರಿಚಯವಿರುತ್ತಾರೆಂದರೆ ಸರಿ. ರಾಜಶೇಖರ್ ರವರು ನಿಮ್ಮ ತಾಯಿಯ ತಮ್ಮ ಎಂದು ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಆರೋಪಿಯು ಮೇಲೆ ಹೇಳಿದ ವಿಚಾರಗಳನ್ನು ತಿಳಿಸಿ ದಿಃ 04-08-2021 ರಂದು ನಿಮಗೆ ನೀವು ನೀಡಿದ ನೋಟೀಸಿಗೆ ಮರುಉತ್ತರ ನೀಡಿರುತ್ತಾರೆಂದರೆ  ನನಗೆ ನೆನಪಿಲ್ಲ. ಆರೋಪಿ ನೀಡಿದ ರಿಪ್ಲೈ ನೊಟೀಸನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯಕ್ಕೆ ಸತ್ಯ ತಿಳಿಸಬಾರದೆಂದು ರಿಪ್ಲೈ ನೋಟಿಸನ್ನು ನೀವು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮಾರ್ಚ 2020 ರಿಂದ 2021 ರವಗೆರೂ ದೇಶದಲ್ಲಿ ಕೊವಿಡ್ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಯಾರುೂ ಹೊರಬರಬಾರದೆಂದು ಸರ್ಕಾರದಿಂದ ಆದೇಶ ಆಗಿತ್ತು ಎಂದರೆ ಸಾಕ್ಷಿ ಮಧ್ಯದಲ್ಲಿ ಸ್ವಲ್ಪ ಸಡಿಲ ಇತ್ತು ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಹಣದ ಆರ್ಥಿಕ ತೊಂದರಿ ಜನರಿಗಿತ್ತು ಎಂದರೆ ಸರಿ.

ಆರೋಪಿಗೆ 15 ಲಕ್ಷ ಹಣ ಕೊಡುವ ಆರ್ಥಿಕ ಸಾಮರ್ಥ್ಯ ನಿಮಗೆ ಇರಲಿಲ್ಲ ಎಂದರೆ ಸರಿ ಯಲ್ಲ. ಆರೋಪಿ ಮಾರ್ಚ 2021 ರಲ್ಲಿ ಯಾವುದೇ ಹಣ ಪಡೆದುಕೊಂಡು ಮೂರು ತಿಂಗಳಲ್ಲಿ ವಾಪಾಸ್ಸು ನೀಡುತ್ತೇನೆಂದು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಚೆಕ್ಕುಗಳು ಆರೋಪಿ ನೀಡಿದ ಚೆಕ್ಕು ಗಳು ಅಲ್ಲ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಹತ್ತಿರ ಯಾವುದೇ ಹಣ ಪಡೆಯದಿದ್ದರೂ ಸಹ ರಾಜಶೇಖರ್ ರವರ ಮಾತು ಕೇಳಿ ಆರೋಪಿ ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೀರಾ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**